2BHK Manipal - 22.5lacs
2BHK Santhkette - 38lacs
2BHK Udupi City - 42lacs
(inclusive of all)
Contact
9901692215/9844615740/0820-4298989

ಉದಯವಾಣಿ
ಜನಮನದ ಜೀವನಾಡಿ
ಮಣಿಪಾಲ । ಬೆಂಗಳೂರು । ಹುಬ್ಬಳ್ಳಿ । ಕಲಬುರಗಿ । ದಾವಣಗೆರೆ । ಮುಂಬಯಿ
Regd.No.UDP/1259/2015-17 | udayavani.com | UDAYAVANI – KANNADA DAILY – MANIPAL ಮಣಿಪಾಲ, ಗುರುವಾರ, ಮಾರ್ಚ್ 23, 2017 ಬೆಲೆ: ₹ 4-00 ವಿದೇಶ ಬೆಲೆ: ₹ 5-00 ಪುಟಗಳು 14+4 (UDP 6, K



## ಟೆಕ್ಸಾಸ್‌ನಲ್ಲಿ ಎಸ್‌ಎಇ ಇಂಟರ್‌ನ್ಯಾಶನಲ್ ಏರೋ ಡಿಸೈನ್ ವೆಸ್ಟ್ ಸ್ಪರ್ಧೆ

# ಸಹ್ಯಾದ್ರಿ ಕಾಲೇಜಿನ ತಂಡಕ್ಕೆ 6ನೇ ಸ್ಥಾನ

ಮಂಗಳೂರು, ಮಾ. 22: ಸಹ್ಯಾದ್ರಿ ಕಾಲೇಜ್ ಆಫ್ ಎಂಜಿನಿಯರಿಂಗ್ ಆ್ಯಂಡ್ ಮ್ಯಾನೇಜ್‌ಮೆಂಟ್‌ನ ಚಾಲೆಂಜರ್ಸ್ ತಂಡವು ಅಮೆರಿಕದ ಟೆಕ್ಸಾಸ್‌ನ ಫೋರ್ಟ್‌ವರ್ತ್‌ನಲ್ಲಿ ನಡೆದ ಎಸ್‌ಐಇ ಇಂಟರ್‌ನ್ಯಾಶನಲ್ ಏರೋ ಡಿಸೈನ್ ವೆಸ್ಟ್ - 2017 ಸ್ಪರ್ಧೆಯ ಮೈಕ್ರೋ ವಿಭಾಗದಲ್ಲಿ ಆರನೇ ಸ್ಥಾನ ಪಡೆದಿದೆ.

ಚಾಲೆಂಜರ್ಸ್ ತಂಡದ ವಿದ್ಯಾರ್ಥಿ ಸದಸ್ಯರಾದ ಪ್ರೊಬಿಡ್ ಜೆ. ಪಣಿಕ್ಕನ್, ಜೆರಾಲ್ಡ್ ಕೆ. ಆ್ಯಂಟನಿ, ಗೌಸ್ ಖಾನ್, ಅಮೃತಾ ಖಂಡ್ರೆ, ಮಿದುನ್ ಜ್ಯೋತಿಸ್, ಪ್ರಣಮ್ಯ, ಶಿಲ್ಪಾ, ಶ್ವೇತಾ ಮತ್ತು ಮೊಹಮ್ಮದ್ ಅನ್ವರ್ ಅವರು ಈ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ವಿಶ್ವಾದ್ಯಂತದ ವಿವಿಧ ದೇಶಗಳ 75 ತಂಡಗಳು ಭಾಗವಹಿಸಿದ್ದವು.

ಚಾಲೆಂಜರ್ಸ್ ತಂಡವು 2017 ಎಪ್ರಿಲ್‌ನಲ್ಲಿ ಅಮೆರಿಕದ ಫ್ಲೋರಿಡಾದಲ್ಲಿ ನಡೆಯುವ ಎಸ್‌ಎಇ ಇಂಟರ್‌ನ್ಯಾಶನಲ್ ಏರೋ ಡಿಸೈನ್ ಈಸ್ಟ್ ಸ್ಪರ್ಧೆಯಲ್ಲಿ ಕೂಡ ಭಾಗವಹಿಸಲಿದೆ.

ಸಹ್ಯಾದ್ರಿ ಕಾಲೇಜು ಆಡಳಿತ ಮಂಡಳಿಯ ಅಧ್ಯಕ್ಷ ಡಾ। ಮಂಜುನಾಥ್ ಭಂಡಾರಿ, ಪ್ರಾಂಶುಪಾಲ ಡಾ। ಉಮೇಶ್ ಎಂ. ಭೂಷಿ ಮತ್ತು ಆಡಳಿತ ಮಂಡಳಿಯವರು ವಿದ್ಯಾರ್ಥಿಗಳನ್ನು ಅಭಿನಂದಿಸಿದ್ದಾರೆ.